O.S. ನಂಬರಃ 66/2021

ಪಿ. ಡಬ್ಲ್ಯೂಃ 1

ದಿಃ 24-06-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಪಾಟಿ ಸವಾಲುಃ 21 ರಿಂದ 25 ನೇ ಪ್ರತಿವಾದಿಯರ ಪರ ಶ್ರೀ ವಿ.ಎಸ್.ಎನ್ ವಕೀಲರಿಂದಃ

ಸರ್ವೆ ನಂ.133/1 ರಲ್ಲಿ ನಮ್ಮ ಪಾಲಿಗೆ 5-ಗುಂಟೆ ಇದೆ. ಈ ಹಿಂದೆ ನನ್ನ ತಾಯಿ ತವರುಮನೆಯಲ್ಲಿ ಆದ ಪಾಲು ವಾಟಣೆಯಲ್ಲಿ ಸದರಿ 5-ಗುಂಟೆ ಹಿಸ್ಸೆಗೆ ಬಂದಿದೆ. ನನ್ನ ತಾಯಿ ಮನೆಗೆ ಸಂಬಂಧಿಸಿದ ಸರ್ವೆ ನಂ.136/1 ಅ ರಲ್ಲಿ ಕೊಂಕಣ ರೈಲ್ವೆ ಇಲಾಖೆಗೆ ಸ್ವಲ್ಪ ಜಾಗೆ ಹೋಗಿದ್ದು, ಅರ್ಧ ಗುಂಟೆ ನನ್ನ ತಾಯಿಗೆ ನೀಡಿರುತ್ತಾರೆ. ಕೊಂಕಣ ರೈಲ್ವೆಗೆ ಸಂಬಂಧಿಸಿದ ಪರಿಹಾರ ಧನದಲ್ಲಿ ಸ್ವಲ್ಪ ಹಣ ನನ್ನ ತಾಯಿಗೆ ನೀಡಿದ್ದು, ಎಷ್ಟು ನೀಡಿರುತ್ತಾರೆಂದು ನನಗೆ ಮಾಹಿತಿ ಇಲ್ಲ.

ಸರ್ವೆ ನಂ.136/1 ಅ ಇದು ನನಗೆ ಮತ್ತು 13 ನೇ ಪ್ರತಿವಾದಿಗೆ ಸಂಬಂಧಪಟ್ಟಿದ್ದು ಎಂದರೆ ಸರಿ. ವಾಟಣೆ ಪ್ರಕಾರ ಮೇಲೆ ತಿಳಿಸಿದ ಎರಡು ಆಸ್ತಿಗಳಲ್ಲಿ ಮಾತ್ರ ನನ್ನ ತಾಯಿಗೆ ಹಿಸ್ಸೆ ಬಂದಿದೆ. ಸದರಿ ಸರ್ವೆ ನಂಬರಗಳು ಒಟ್ಟು ಕುಟುಂಬದ ಆಸ್ತಿಗಳು ಎಂದರೆ ಸರಿ. ಸದರಿ ಆಸ್ತಿಗಳನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ನನ್ನ ಅಜ್ಜಿ ಮಂಕಾಳಿ ಯಾವಾಗ ಮೃತಪಟ್ಟಿದ್ದಾಳೆಂದು ಮಾಹಿತಿ ಇಲ್ಲ. ನನ್ನ ತಾಯಿ 12-13 ವರ್ಷಗಳ ಹಿಂದೆ ಮೃತಪಟ್ಟಿದ್ದಾಳೆ. ನನ್ನ ತಾಯಿ ಮೃತಪಟ್ಟ ನಂತರ ವಾರಸಾ ಮಾಡಿಕೊಂಡಿದ್ದೇವೆ. ವಾರಸಾದಲ್ಲಿ ನನ್ನ ಸಹೋದರ ಸಹೋದರಿಯರ ಹೆಸರು ಸೇರಿಸಿಲ್ಲ ಎಂದರೆ ಬೇಡ ಎಂದು ತಿಳಿಸಿರುತ್ತಾರೆಂದು ಹೇಳುತ್ತಾರೆ.

ನನ್ನ ತಾಯಿಯ ಸಹೋದರ–ಸಹೋದರಿಯರು ಮೃತಪಟ್ಟ ನಂತರ ಅವರ ವಾರಸುದಾರರು ಆಸ್ತಿ ಮುಟೇಶನ್ ಮಾಡಿಕೊಂಡಿರುತ್ತಾರೆ ಎಂದರೆ ಅವರ ಕುರಿತು ಮಾಹಿತಿ ಇಲ್ಲ ಎಂದು ಹೇಳುತ್ತಾರೆ. ಪಹಣಿಪತ್ರಿಕೆ ನೋಡಿಲ್ಲ ಎಂದರೆ ಸರಿ. ಸರ್ವೆ ನಂ.39/3 ರಲ್ಲಿಯ ಮೂಲ ಮನೆಯಲ್ಲಿ 21ನೇ ಪ್ರತಿವಾದಿ ಕುಟುಂಬದವರು ವಾಸಿಸುತ್ತಾರೆ ಎಂದರೆ ಇರಬಹುದು. ಸದರಿಯವರು ವಾಸ ಮಾಡಲಿಕ್ಕೆ ನನ್ನ ತಕರಾರು ಇಲ್ಲ ಎಂದರೆ ಸರಿ. ಸರ್ವೆ ನಂ.39/3 ತಾಯಿಯ ತಂದೆಗೆ ಯಾವ ಮೂಲದಿಂದ ಬಂದಿದೆ ಎಂದು ಮಾಹಿತಿ ಇಲ್ಲ. ಪ್ರತಿವಾದಿಯರು ಆಸ್ತಿಗಳ ಕುರಿತು ವಾರಸಾ ಮಾಡಿಕೊಳ್ಳುವಾಗ ನಾನು ತಕರಾರು ಅರ್ಜಿ ನೀಡಿಲ್ಲ ಎಂದರೆ ಸರಿ. ಸುಳ್ಳು ದಾವೆ ಮಾಡಿ ಸುಳ್ಳು ಸಾಕ್ಷಿ ಹೇಳುತ್ತಿರುವೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಸಿವಿಲ್ ನ್ಯಾಯಾಧೀಶರು, ಅಂಕೋಲಾ.